3H1

11. ಕಂಟ್ರಾಕ್ಟುದಾರ ವಸೂಲ್ಮಾಡಬೇಕಾದ ದರಗಳ ತಪ್ಪೀಲು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದ್ಮಾಡಿ ಇದೆ.

1	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2	ಡಿಟೋ ಎರಡು ಡಿಟೋ	1	0	0
3	ಪ್ರತಿ ಯಕ್ಕಾ ಮೇಲೂ	0	4	0
4	ಸ್ಪ್ರಿಂಗ್ಯಾನೆ ಬಿಲ್ಲಿನ ಮೇಲೆ ಇರುವ ಬಾಡಿಗೆ ಭಂಡಿ ಪ್ರತಿ ಬಂದಕ್ಕೆ	0	2	0
5	ಎಂಟು ಎತ್ತುಗಳಿಂದ, ಕೋಣಗಳಿಂದ, ಕುದರೆಗಳಿಂದ, ಟೂಕಣಗಳಿಂದ, ಕತ್ತೆಗಳಿಂದ ಯಾ ಹೇಸರು ಕತ್ತೆಗಳಿಂದ ಯಳೆಯಲ್ಪಟ್ಟ ಮತ್ತು ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ ಬಂದಕ್ಕೆ	1	8	0
6	ಡಿಟೋ ಭರ್ತಿ ಇಲ್ಲದಿದ್ದರೆ	0	8	0
7	ಆರು ಎತ್ತುಗಳು ವಗೈರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ	0	12	0
8	ಆರು ಎತ್ತುಗಳು ವಗೈರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಇಲ್ಲದಿದ್ದರೆ	0	6	0
9	ನಾಲ್ಕು ಎತ್ತುಗಳು ವಗೈರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಆಗಿದ್ದರೆ	0	8	0
10	ಡಿಟೋ ಡಿಟೋ ಭರ್ತಿಇಲ್ಲದಿದ್ದರೆ	0	4	0
11	ಎರಡು ಎತ್ತುಗಳಿಂದ, ಕೋಣಗಳಿಂದ, ಕುದರೆಗಳಿಂದ, ಟೂಕಣಗಳಿಂದ, ಕತ್ತೆಗಳಿಂದ, ಹೇಸರು ಕತ್ತೆಗಳಿಂದ ಎಳೆಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ	0	4	0
12	ಡಿಟೋ ಭರ್ತಿ ಇಲ್ಲದಿದ್ದರೆ	0	2	0
13	ಕೋಣಗಳು ಯಾ ಎತ್ತುಗಳು ರಾಸು 1ಕ್ಕೆ ಹೊರಿಸಲ್ಪಟ್ಟು ಇದ್ದರೆ	0	1	0
14	ಡಿಟೋ ಹೊರೆ ಇಲ್ಲದಿದ್ದರೆ	0	0	3
15	ಪ್ರತಿ ಆನೆಗೂ	1	8	0
16	ಪ್ರತಿ ಒಂಟೆಗೂ ಹೊರಿಸಲ್ಪಟ್ಟಿದ್ದರೆ	0	8	0
17	ಡಿಟೋ ಹೊರೆ ಇಲ್ಲದಿದ್ದರೆ	0	4	0
18	ಪ್ರತಿ ಕುದರೆಗೂ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	1	6
19	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ 1 ಕುದರೆಗೂ	0	0	9
20	ಪ್ರತಿ ತಟ್ಟು ಯಾ ಹೇಸರಕತ್ತೆ ಹೊರೆ ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	9
21	ಪ್ರತಿ ತಟ್ಟು ಯಾ ಹೇಸರಕತ್ತೆ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ	0	0	6
22	ಪ್ರತಿ ಕತ್ತೆಗೂ ಹೊರೆ ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	6
23	ಹೊರೆ ಇಲ್ಲದೆ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ	0	0	1
24	ಪ್ರತಿ ಕುರಿ, ಮೇಕೆ ಯಾ ಸಂದಿ	0	0	1
25	ಎಂಟು ಜೋಯಿಗಳ ವರೆಗೆ ಪ್ರತಿ ಡೋಲಿ, ಪಾಲಕಿ ಯಾ ಟಾಂಜಾನಿಗೂ	1	0	0
26	ಆರು ಜೋಯಿಗಳೊಡನೆ ಡಿಟೋ	0	12	0
27	ನಾಲ್ಕು ಜೋಯಿಗಳೊಡನೆ ಡಿಟೋ	0	8	0
28	ಇಬ್ಬರು ಜೋಯಿಗಳೊಡನೆ ಡಿಟೋ	0	4	0

ನಡದು ಬರುವ ಮಾರ್ಗಸ್ತರ ಮೇಲೆ ಟೋಲ್ ವಸೂಲ್ ಮಾಡಕ್ಕೆ ದ್ದಲ್ಲ.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇನ್ಸಿ ಹೂರ್‌ನಾಮೆ.

1896ನೇ ಇಸವಿ ಏಪ್ರಿಲ್ 1ನೇ ಮಟ್ಟಿಂ, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

I. ಈ ಕೆಳಗೆ ಕಂಡ ಶಿವಮೊಗ್ಗಾ ಡಿಸ್ಟ್ರಿಕ್ಟು ತಾಲ್ಲೂಕುಗಳ ಬಗನೆ ಕೇಂದಿ ಪೈಕಾರ್ ಮತ್ತು ಮೂರುವ ಹಕ್ಕು : ಸ್ಯ 1896ನೇ ಜುಲೈ ಗುರೈ ಲಾಗಾಯತು 1897ನೇ ಜೂ 30ರ ವರಿಗೆ ಗ್ರಾಮವಾರಾಗಿ ಆಗಲಿ ಅಥವಾ ಗ್ರಾಮ ಸಮುದಾಯಕ್ಕೇನ ಆಗಲಿ ಆಯಾ ತಾಲ್ಲೂಕು ಬಾಜಾಪಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸಿರುವ ಷರತ್ತುಗಳಿಗೆ ವಳಪಟ್ಟು ಆಯಾ ತಾಲ್ಲೂಕು ಕಛೇರಿ ರೂಬರೂ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ವಬ್ಬರು ಅಸಿಸ್ಟೆಂಟ್ ಕಮ್ಮಿಷನರವರಿಂದಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಲೇವಾರಿಯಿಸಲ್ಪಡುತ್ತದೆ.

ಕ್ರ	ತಾಲ್ಲೂಕು	ಹರಾಜು ತಾರೀಖು	
1	ಶಿಕಾರಿಪುರ	ಸ್ಯ 1896ನೇ ಮೇ	11—12
2	ಸೊರಬ	ಡಿಟೋ	14—15
3	ಸಾಗರ	ಡಿಟೋ	18—19
4	ನಗರ	ಡಿಟೋ	21—22
5	ತೀರ್ಥಹಳ್ಳಿ	ಡಿಟೋ	25—26

II. ಪ್ರತಿ ಬಂದು ಸರಕಕ್ಕೆ ಗುತ್ತಿಯನ್ನು ಚಕಡದರಖಾಸ್ತು ದಾರನಿಗೆ ಕೊಡಲ್ಪಡುವದು, (ಸದರೀ ಚಕಡದರಖಾಸ್ತು ಸ್ವಾಧ್ಯವಾದ ವಟ್ಟಿಗೂ ಕಳೆದ ಸಾಲಿಗಳ ಮೊಬಲಗ್ಯೆಕಮ್ಮಿ ಇರಕೂಡದು) ಈ ಹರಾಜು ಅಸಿಸ್ಟೆಂಟ್ ಕಮ್ಮಿಷನರವರಿಂದ ಮಾಡಲ್ಪಟ್ಟಲ್ಲಿ ಅದು

342

ಡೆಪ್ಯೂಟಿ ಕಮ್ಮಿಷನರವರ ಮುಂಜೂರಿಗೆ ಬಳಪಟ್ಟು ಇರತಕ್ಕದ್ದಾಗಿ ಇರುತ್ತೆ ಅಂಥಾ ಹರಾಜಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಸದರೀ ಯವರು ಡೆಪ್ಯೂಟಿ ಕಮ್ಮಿಷನರವರಲ್ಲಿಗೆ ಕಳುಹಿಸತಕ್ಕದ್ದು, ಡೆಪ್ಯೂಟಿ ಕಮ್ಮಿಷನರವರು ಯಾವದೊಂದು ದರಖಾಸ್ತೂ ಅಥವಾ ಜಪ್ತಿದರ ಖಾಸ್ತನ್ನಾದರೂ ಯಾವದೊಂದು ಕಾರಣವೂ ತಿಳಿಸದೆ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

III. ಹರಾಜಿನಲ್ಲಿ ಸವಾಲ್ ಮಾಡಲು ಇಷ್ಟ ಪುಳ್ಳ ಜನಗಳು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕನ ಮೂಲಕವಾಗಿಯಾಗಲಿ ಹಾಜರಾಗಬೇಕು. ಡೆಪ್ಯೂಟಿ ಕಮ್ಮಿಷನರವರಿಂದ ಅಂಗೀಕರಿಸಲ್ಪಡುವ ಜಪ್ತಿದರಖಾಸ್ತುದಾರನು ಸದರೀ ಗುತ್ತಿಗೆ ಮೊಬಲಗು ಹತ್ತು ರೂಪಾಯಿಗೆ ಅಥವಾ ಹತ್ತು ರೂಪಾಯಿಗೆ ಕಮ್ಮಿ ಇದ್ದರೆ ಸದರೀ ದರಖಾಸ್ತು ಪೂರಾ ಮೊಬಲಗು ಹರಾಜು ಮಾಡತಕ್ಕ ಆಫೀಸರಲ್ಲಿ ಆ ಕೂಡಲೆ ಹಾಜರು ಮಾಡಬೇಕು. ಮತ್ತು ಹತ್ತು ರೂಪಾಯಿಗೆ ಮೇಲ್ಪಟ್ಟು ಹರಾಜು ಆದ ಸಂದರ್ಭದಲ್ಲಿ ಸಾಲ ಗುತ್ತಿಗೆ ಮೊಬಲಗು ಎಷ್ಟು ನಿಷ್ಕರ್ಷೆ ಆಗುತ್ತೆ ಅದರ ಹನ್ನೆರಡರಲ್ಲಿ ಒಂದು ಭಾಗದ್ದು ಮೊಬಲಗು ಬಡ್ಡಿನ ಡಿಪಾಜಿಟ್ ಮಾಡಬೇಕು ಡೆಪ್ಯೂಟಿ ಕಮ್ಮಿಷನರವರ ಮುಂಜೂರಿ ತಿಳಿಯಪಡಿಸಿದ 8 ದಿವಸದ ಒಳಗಾಗಿ. ಹಿಂದೆ ಹಾಜರು ಮಾಡಿದ ಡಿಪಾಜಿಟ್ ಮೊಬಲಗು ಕೇರಿ ಸಾಲ ಗುತ್ತಿಗೆ ಮೊಬಲಗಿನ ಮೂರು ತಿಂಗಳ ಖಿಸ್ತು ಮೊಬಲಗು ನಗದಾಗಿಯಾಗಲಿ ಅಥವಾ ಗವರ್ನಮೆಂಟ್ ಪತ್ರ ಮೂಲಕವಾಗಿಯಾಗಲಿ ಅಮಲ್ದಾರ್ರಲ್ಲಿ ಹಾಜರ್ಮಾಡಬೇಕು. ಹಾಗೆ ಗವರ್ನಮೆಂಟ್ ಪತ್ರ ಹಾಜರ್ಮಾಡುವ ಸಂದರ್ಭದಲ್ಲಿ ಕಂಟ್ರಾಕ್ಟು ಷರತ್ತು ನೆರವೇರಿಕೆ ಖಾತ್ರಿಗಾಗಿ ಹಾಜರ್ಮಾಡಿದೆ ಎಂದು ಸದರೀ ಪತ್ರ ಜೈಲ್ ಡೆಪ್ಯೂಟಿ ಕಮ್ಮಿಷನರವರ ಹೆಸರಿಗೆ ಇಂಡಾರ್ಸ್ ಮಾಡಿಕೊಡತಕ್ಕದ್ದಾಗಿ ಇರುತ್ತೆ ಅಥವಾ ವೇಲ್ಕ್ರಂಡಂತೆ ಕೊಡತಕ್ಕ ಜಾಮೀನಿ ಮೊಬಲಗ್ಗಾಗಿ ಅರವತ್ತಿ ನಗದಾಗಿಯಾಗಲಿ ಅಥವಾ ಮೇಲ್ಕ್ರಂಡಂತೆ ಇಂಡಾರ್ಸ್‌ಮಾಡಿ ಕೊಟ್ಟ ಗವರ್ನಮೆಂಟ್ ಪತ್ರ ಮೂಲಕವಾಗಿಯಾಗಲಿ ಬಾಕಿ ಅರ್ಧ ಭಾಗ ಸ್ಥಿರಸೊತ್ತು ಮೂಲಕ ಜಾಮೀನ್ ಕೊಡಬಹುದು ಹಾಗೆ ಆಧಾರ ಮಾಡುವ ಸ್ಥಿರಸೊತ್ತಿನ ಪಲೆ ಜಾಮೀನ್ ಮೊಬಲಗಿನ ಎರಡರಷ್ಟು ಬೆಲೆಯುಳ್ಳದ್ದಾಗಿ ಇರಬೇಕು, ಮತ್ತು ಇದರ ಮೇಲೆ ಇತರರ ಹಕ್ಕು ಬಾಧ್ಯತೆ ಯಾವದೂ ಇರಕೂಡದು. ನಗದಾಗಿ ಠೇವಣಿ ಇಟ್ಟ ಮೊಬಲಗು. ಆಖೈರ್‌ಮೂರು ತಿಂಗಳ ಖಿಸ್ತಿನ ಒಗ್ಗೆ ಜಮೆ ಹಿಡಿಯಲ್ಪಡುತ್ತದೆ. ಈ ಹರಾಜುದಾರನು ಇದರಲ್ಲಿ ಕಂಡ ಷರತ್ತುಗಳಿಗೆ ಬಳಪಟ್ಟು ನಡಕೊಳ್ಳಲು ಬದ್ಧನಾಗಿರತ್ತೇನೆಂತ ಕ್ರಮವಾದ ಸ್ಟ್ಯಾಂಪು ಕಾಗದದ ಮೇಲೆ ಮಾಮೂಲಿನಂತೆ ಮುಚ್ಚಳಿಕೆ ಬರಕೊಡತಕ್ಕದ್ದಾಗಿ ಇರುತ್ತೆ.

IV. ಮೇಲಿನ ವ್ಯಾಪಾರದಲ್ಲಿ ನಿಬಂಧಿಸಿ ಇರುವ ಡಿಪಾಜಿಟ್ ಹಾಜರ್ಮಾಡದೆ ತಪ್ಪಿದರೂ, ಅಥವಾ ಮುಚ್ಚಳಿಕೆ ಬರಕೊಡದೆ ತಿರಸ್ಕರಿಸಿದರೂ, ಪೂರಾ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಕೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬ್ ಪುನಹ ಹರಾಜು ಮೂಲಕವಾಗಿಯಾಗಲಿ ಅಥವಾ ಇತರ ವಿಧವಾಗಿಯಾಗಲಿ ವಿಲೇವಾರಿ ಮಾಡಲ್ಪಡುತ್ತೆ. ಹಾಗೆ ಮಾಡುವದರಲ್ಲಿ ಸರ್ಕಾರಕ್ಕೆ ಲುಕ್ಸಾನು ಯೀನಾದರೂ ಸಂಭವಿಸುವ ಪಕ್ಷ ಅಂಥಾ ಮೊಬಲಗು ಕಂದಾಯ್ದ ಬಾಕಿಯಂತೆ ಸದರೀಯವನ ಜಿಂದಗಿ ಜಪ್ತೀ ಹರಾಜು ಮೂಲಕ ವಸೂಲ್ ಮಾಡಿಕೊಳ್ಳಲ್ಪಡುತ್ತೆ.

V. ಈಜಲ್ ಕೇಂದಿ ಕಂಟ್ರಾಕ್ಟು ಸಂಬಂಧದಲ್ಲಿ ವಿಧಾಯಕವಾಗಿರುವ ಷರತ್ತುಗಳು ಈ ಬಗನೀ ಕೇಂದಿ ಇಜಾರೆ ಬಗ್ಯೂ ಅನ್ವಯಿಸಲ್ಪಡುತ್ತೆ.

VI. ಹಿಂದಿನ ಸೂಚನೆಗಳ ಬಗನೀ ಕೇಂದಿ ಹುಟ್ಟುವಳಿ ಮತ್ತು ಇತರ ತಪ್ಶೀಲ್ ತಿಳಿಯಬೇಕಾಗಿದ್ದರೆ ತಾಲ್ಲೂಕು ಅಮಲ್ದಾರು ಅಥವಾ ಶಿರಸ್ತೇದಾರಲ್ಲಿ ದರಖಾಸ್ತು ಕೊಟ್ಟು ತಿಳಿಕೊಳ್ಳಬಹುದು.

ಎಂ. ರಾಮಚಂದ್ರರಾವ್,
ಫಾರ್ ಅಫೀಷಿಯೇಟಿಂಗ್ ಡೆಪ್ಯೂಟಿ ಕಮ್ಮಿಷನರ್.

ತಾರೀಖು 4ನೇ ಏಪ್ರೆಲ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಇದರಡಿನಮೂಡಿಸಿರುವ ಚಾಪೀನೆ ಮತ್ತು ಕೊಂಬು ಶಿವಮೊಗ್ಗ ಡಿಸ್ಟ್ರಿಕ್ಟಿನ ಡಿಸ್ಪೋಗಳಲ್ಲಿ ಅವುಗಳ ಬಾಜಾದಲ್ಲಿ ಕೊಣಿಸಿರುವ ತಾರೀಖುಗಳಲ್ಲಿ ಫಾರೆಸ್ಟ್ ಆಫಿಸರ್ ಮತ್ತು ಡೆಪ್ಯೂಟಿ ಕಮ್ಮಿಷನರ್ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರಗಳಿಂದ ಹರಾಜು ಮಾಡಿಸಲ್ಪಡುವದು.

ನಂಬರು.	ಡಿಪೋಗಳ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟು.	ರಿಜರವ್ಡ ನಾಟು.	ಅ ರಿಜರ್ವಡ್ ನಾಟು.	ಸಾಗುವಾನಿ ಬೆಲಗು ತುಂಡು.	ಕಾಡುಜಾತಿ ಬೆಲಗು.	ಕೊಂಬು.	ಷರಾ.
1	ಆನವಟ್ಟಿ	1 5 96	30	..		151	43	1,325	ಸ್ವಲ್ಪ ಕಡ್ಡಿ ಕೊಂಬು.
2	ಶಿರಾಳಕೊಪ್ಪ	4 5 96	26	89	2	151	23	393	
3	ಶಿಕಾರಿಪುರ	7 5 96	4	32	2	11	..	1,000	
4	ಚೆನ್ನಗಿರಿ	11 5 96	..	..	..	250	..	2,000	
5	ಹೊಬ್ಬಾಣಿ	1 5 6	..	..	..	42	..	1,500	
6	ಆಯನೂರು	1 6 6	100	100	25	200	..	5,000	
7	ಶಿವಮೊಗ್ಗ	8 6 6	110	163	7	36	100	3,564	
8	ಕಣಬೂರು	12 6 96	100	130	20	..	..	..	
9	ಸಮುದ್ರಹಳ್ಳಿ	13 6 96	..	125	25	..	..	..	

ಹರಾಜು ಷರತ್ತುಗಳು:—ತಾರೀಖು 25—4—95ನೇ ನಂಬರ್ 15ನೇ ಮೈಸೂರು ಗೆಜೆಟಿನಲ್ಲಿ ಪ್ರಕಟಿಸಿರುವ ತಾರೀಖು 15—3—95ನೇ ನಂಬರ್ 15,229.—155-92ನೇ ನೋಟಿಫಿಕೇಷನ್ ನೋಡತಕ್ಕದ್ದು.

ಸಿ. ನಾರಾಯಣರಾವ್, ಡೆಪ್ಯೂಟಿ ಕನ್ಸರ್ವೇಟರ್.

ಸ್ವಂತಪ್ರಕಟನೆ.

ನೋಟ್ಸ್.

ಮಂಡ್ಯದ ತಾಲ್ಲೂಕು ಆತಗೂರು ಹೋಬಳಿ ಕದ್ದೂರಲ್ಲಿರುವ ಯಡತೊರೆ ತಾಲ್ಲೂಕು ಮಾವತ್ತೂರು ವೆಂಕಟಸುಬ್ಬಯ್ಯನವರ ಹೆಂಡತಿ ವೆಂಕಟಲಕ್ಷ್ಮಮ್ಮನು, ಇದರಿಂದ ಸಕಲರಿಗೂ ತಿಳಿಯಪಡಿಸುವದೇನಂದರೆ,–ನಾನು ಮಂಡ್ಯದ ತಾಲ್ಲೂಕು ಸರ್ವೆ ನಂಬರು ಕೆ ಸೂರು, ಅಲ್ಲರುವ ಹರಿಯಣ್ಣಯ್ಯನ ನರಸಯ್ಯನವರ ಮಕ್ಕಳು ನರಸುಹ್ಮಯ್ಯನವರಿಗೆ, ನಾನು ಬರದುಕೊಟ್ಟಿರುವ 94ನೇ ಇನವಿ ಆಕ್ಟೋಬರ್ 21ನೇ ಮಾರ್ಚ್ ಜನರಲ್ ಪವರಿಫ್ ಲಟ್ನ ನೋಟ್ಸು ಮೊಕ್ತ್ಯಾರನಾಮೆಯನ್ನು ನಾನು ರದ್ದು ಪಡಿಸಿರುವದರಿಂದ ಈ ತಾರೀಖು ಲಗಾಯತ್ತು ಮುಂದೆ ನನಗೂ ಸದರಿ ಅವರಲ್ಲಿ ಯಾವವಿಧವಾದ ಲೇವಾದೇನಿ, ಲೆಕ್ಕ ಚಾರ ಮತ್ತು ಕಾಗದ ಪತ್ರಗಳನ್ನು ಇತರರು ನಡಿಸಕೂಡದು. ಹಾಗೆ ನಡಿಸಿದರೆ ಅದಕ್ಕೆ ನಾನು ಬದ್ಧಳಾಗಲಾರೆನಾದ ವಿವರ ತಿಳಿಯುವದು. ತಾರೀಖು 12—4—96.

ಒ ವೆಂಕಟಲಕ್ಷ್ಮಮ್ಮನ ಗುರುತಿನ ರುಜುವಿಗೆ ಕದಲೂರು ಶಾನಭೋಗ ವೆಂಕಟಸುಬ್ಬಯ್ಯನ ಬರಹ.